ಸರಹದ್ದನ್ನು ವಿಸ್ತಾರಗೊಳಿಸಿತು.

ಆ ದಿನಗಳಲ್ಲಿ ಗೋಂದಿಯಾದ ಕೆಲವು ಯುವಕರು ಸೈಕಲ್ ಮೇಲೆ ವೈಷ್ಣೋದೇವಿಗೆ ಹೋಗಿ ಬಂದ ಸುದ್ದಿ ಬಹಳಷ್ಟು ಪ್ರಚಾರದಲ್ಲಿತ್ತು. ದಿನೇಶ್ ಸ್ಥಳೀಯ ದಿನ ಪತ್ರಿಕೆಯ ಮೊದಲ ಪುಟದಲ್ಲಿಯೇ ಅವರುಗಳ ಫೋಟೊ ಬಂದಿರುವುದನ್ನು, ಇಡೀ ಪತ್ರಿಕೆಯಲ್ಲಿ ಅವರ ಸಾಹಸದ ಕಥೆಗಳು ತುಂಬಿ ಹೋಗಿರುವುದನ್ನು ತಿಳಿಸುತ್ತಿದ್ದ. ವೈಷ್ಣೋದೇವಿ ಗೋಂದಿಯಾದಿಂದ ಸುಮಾರು ಎರಡು ಸಾವಿರ ಕಿಲೋಮೀಟರ್ ದೂರದಲ್ಲಿತ್ತು. ಗೋಂದಿಯಾದಲ್ಲೆಲ್ಲ ಅವರದೇ ಚರ್ಚೆ. ನಮ್ಮದೇ ಊರಿನ ಯುವಕರ ಈ ಸಾಹಸ ಮತ್ತು ಅವರಿಗೆ ಸಿಗುತ್ತಿರುವ ಪ್ರಸಿದ್ಧಿ ಎರಡೂ ಭಾವೇಶ್ ಮತ್ತು ದಿನೇಶ್ ಅವರನ್ನು ಪ್ರೇರೇಪಿಸಿತ್ತು. ಪ್ರತಿದಿನ ದಿನೇಶ್ ಪತ್ರಿಕೆಯಲ್ಲಿ ಬಂದ ಅವರುಗಳ ಸುದ್ದಿಯನ್ನು ಓದುತ್ತಿದ್ದಂತೆ, ಭಾವೇಶ್‌ಗೆ ಅನಿಸಿತು – ನಾವೂ ಕೂಡಾ ಇಂತಹ ಸಾಹಸವನ್ನು ಏಕೆ ಮಾಡಬಾರದು? ಮನಸ್ಸಿನಲ್ಲಿ ಮೂಡಿದ ತಮ್ಮ ಇಚ್ಛೆಯನ್ನು ದಿನೇಶನಿಗೆ ಹೇಳಿದರು. ಅವರ ಮತ್ತೊಬ್ಬ ಗೆಳೆಯ ಪುರುಷೋತ್ತಮ್ ನಾಗ್ದೇವ್‌ಗೂ ಹೇಳಿದರು.

ಗೆಳೆಯರೊಡನೆ, ಭಾವೇಶ್ ಸೈಕಲ್ಲಿನಲ್ಲಿ ಸುತ್ತಮುತ್ತಲೂ ಅಲೆದಾಡಿ ಬರುತ್ತಿದ್ದರು. ಭಾವೇಶನನ್ನು ಗೆಳೆಯರು, ಹಿಂದಿನ ಸೀಟಿನಲ್ಲಿ ಇಲ್ಲವೇ ಮುಂದೆ ಸೈಕಲ್ ಬಾರ್ ಮೇಲೆ ಕೂರಿಸಿಕೊಂಡು ಸುತ್ತಾಟಕ್ಕೆ ಕರೆದೊಯ್ಯುತ್ತಿದ್ದರು. ಭಾವೇಶ್‌ಗೆ ಏನೋ ಹೊಳೆಯಿತು. ತನಗೆ ಕಣ್ಣುಕಾಣದೆ ಇದ್ದರೇನು, ಸ್ನಾಯುಬಲವಿದೆ. ಮುಂದೆ ಕುಳಿತು ನಾನು ಸೈಕಲ್ ಓಡಿಸಲು ಸಾಧ್ಯವಿಲ್ಲದೆ ಇರಬಹುದು, ಆದರೆ ಹಿಂದೆ ಕುಳಿತು ದಿನೇಶನಿಗೆ ಸೈಕಲ್ ಓಡಿಸಲು ಸಹಾಯ ಮಾಡಬಹುದಲ್ಲ. ಒಂದು ಸೈಕಲ್‌ಗೆ ಎರಡು ಜೊತೆ ಪೆಡಲ್ ಕೂಡಿಸಿದರೆ ಆಯಿತು. ಮನಸ್ಸಿಗೆ ಹೊಳೆದೊಡನೆ ಎದೆಯಲ್ಲಿ ಎಲ್ಲಿಲ್ಲದ ಉತ್ಸಾಹ ಉದ್ವೇಗ. ಈ ಮಿತ್ರನೊಡನೆ ಭಾವೇಶ್ ಜಗತ್ತು 'ನೋಡಿ' ಬರಲು ಒಂದು ಸೈಕಲ್ ಪ್ರವಾಸವನ್ನು ಯೋಚಿಸಿದರು. ಮಹಾರಾಷ್ಟ್ರದ ತಮ್ಮ ಗೋಂದಿಯಾ ನಗರದಿಂದ ನೇಪಾಳದ ಕಠಮಂಡುವಿಗೆ ಹೋಗಿ ಬರುವ ಯೋಜನೆ ಅವರದು! ಆಗವರಿಗೆ ಹದಿನೇಳು ವರ್ಷ ತುಂಬಲಿತ್ತು.

ತಮ್ಮದೇ ಕಾಲೇಜಿನಲ್ಲಿ ಓದುತ್ತಿದ್ದ ಸಹಪಾಠಿಯೊಬ್ಬನ ಮನೆಯವರ 'ಸೈಕಲ್ ಶೋರೂಮ್' ಇತ್ತು. ಆತನನ್ನು ಹೋಗಿ ಭೆಟ್ಟಿ ಮಾಡಿದರು. ಶೋರೂಮಿನ ಕರ್ಮಚಾರಿಯೊಡನೆ ತಮ್ಮ ಸೈಕಲ್ ಪ್ರವಾಸದ ಉದ್ದೇಶವನ್ನು ಮುಂದಿಡುತ್ತಾ, ಹಿಂದೆ ಕುಳಿತು ಭಾವೇಶ್ ಸೈಕಲ್ ಪೆಡಲ್ ತುಳಿಯುವ ಬಗೆಯನ್ನು ಚರ್ಚೆ ಮಾಡಿದರು. ಆ ಕರ್ಮಚಾರಿ, ಹಿಂದೆ ಇನ್ನೊಂದು ಜೊತೆ ಪೆಡಲ್ ಕೊಡಲು ಸಾಧ್ಯವಿದೆ ಎಂದು ತಿಳಿಸಿದ. ಇದರಿಂದ ಗೆಳೆಯರಿಗೆ ಎಲ್ಲಿಲ್ಲದ ಉತ್ಸಾಹ ಮೂಡಿತು.

ಯಾವುದೇ ಯೋಜನೆ ಯಶಸ್ವಿಯಾಗಲು ಪೂರ್ವಸಿದ್ಧತೆ ಬೇಕಾಗುತ್ತದೆ. ಅದಾಗಲೇ ಈ ಹಾದಿಯಲ್ಲಿ ನಡೆದವರಿದ್ದರೆ ಅವರ ಅನುಭವದಿಂದ ಬಹಳಷ್ಟು ಕಲಿಯ ಬಹುದಿದೆ. ಮೂವರು ಗೆಳೆಯರೂ ವೈಷ್ಣೋದೇವಿಗೆ ಹೋಗಿ ಬಂದ ಆ ಯುವಕರನ್ನು ಭೆಟ್ಟಿ ಮಾಡಿದರು. ಹಾದಿಯಲ್ಲಿ ಎದುರಾಗುವ ಅಡಚಣೆಗಳ ಬಗ್ಗೆ ಕೇಳಿ ತಿಳಿದುಕೊಂಡರು. ಅವರು ದಿನಕ್ಕೆ ಎಷ್ಟು ದೂರ ಸೈಕಲ್ ತುಳಿದರು? ತಮ್ಮ ಆ ಸೈಕಲ್ ಪ್ರವಾಸಕ್ಕೆ ಏನೆಲ್ಲಾ ತಯಾರಿ ಮಾಡಿದ್ದರು? ಅವರ ಸೈಕಲ್ ಕೆಟ್ಟು ಕೂತಾಗ ಹೇಗೆ ರಿಪೇರಿ ಮಾಡಿಕೊಂಡರು? ಅವರ ಈ ಪ್ರವಾಸಕ್ಕೆ ಹಣವನ್ನು ಹೇಗೆ ಕೂಡಿಸಿದರು? ತಮ್ಮ ಪ್ರವಾಸದ ಪೂರ್ವ ಸಿದ್ಧತೆಗೆ ನೆರವಾಗಬಲ್ಲ ಎಲ್ಲ ಮಾಹಿತಿಯನ್ನೂ ಅವರಿಂದ ಸಂಗ್ರಹಿಸಿದರು.

ಬಹಳಷ್ಟು ಯೋಚಿಸಿ, ಗೋಂದಿಯಾದಿಂದ ನೇಪಾಳಕ್ಕೆ ಹೋಗುವುದೆಂದು ನಿರ್ಧರಿಸಿದ್ದರು. ನೇಪಾಳಕ್ಕೆ ಹೋಗಲು ವೀಸಾ ಅವಶ್ಯಕತೆ ಇರಲಿಲ್ಲ. ಭಾರತದಿಂದ ನೇಪಾಳಕ್ಕೆ ಪ್ರವೇಶಿಸಲು, ಸರಹದ್ದಿನಲ್ಲಿ ಒಂಬತ್ತು ಸ್ಥಳಗಳಿದ್ದವು. ಎಲ್ಲಿಂದ ಬೇಕಾದರೂ ಹೋಗಿ ಬರಬಹುದಿತ್ತು. ನೇಪಾಳಕ್ಕೆ ಹೋಗುವುದರಿಂದ, ಬೇರೊಂದು ದೇಶಕ್ಕೆ ಹೋದ ರಬ್ಬರ್ ಸ್ಟಾಂಪ್ ಬೀಳುತ್ತಿತ್ತು ಮತ್ತು ಇದೊಂದು ದಾಖಲೆಯೂ ಆಗಲಿತ್ತು. ಜೊತೆಗೆ ವೈಷ್ಣೋದೇವಿಯ ಸೈಕಲ್ ಯಾತ್ರೆಗೆ ಹೋಲಿಸಿದರೆ, ಇದು ಬಹಳಷ್ಟು ಹೆಚ್ಚಿನ ದೂರದ ಯಾತ್ರೆಯಾಗಲಿತ್ತು. ವಿದೇಶಕ್ಕೆ ಹೋಗಿ ಬಂದ ವಿಶೇಷ ಪ್ರವಾಸ ಎಂಬ ಹಿರಿಮೆ ಜೊತೆಗೂಡಲಿತ್ತು. ಇವೆಲ್ಲವನ್ನು ಯೋಚಿಸಿ, ಮಹಾರಾಷ್ಟ್ರದ ತಮ್ಮ ಗೋಂದಿಯಾದಿಂದ ನೇಪಾಳದ ಕಠಮಂಡುವಿಗೆ ಸೈಕಲ್‌ನಲ್ಲಿ ಹೋಗಿ ತಲುಪುವುದು, ಸೈಕಲ್ ಮೇಲೆಯೇ ಹಿಂತಿರುಗುವುದು ಎಂಬ ಯೋಜನೆ ರೂಪುಗೊಂಡಿತು.

ದೀಪಾವಳಿಯ ಸಮಯಕ್ಕೆ ಕಠಮಂಡುವಿನಲ್ಲಿ ಇರುವಂತೆ ಹೊರಡುವ ದಿನಾಂಕವನ್ನು ನಿರ್ಧರಿಸಿದರು. ಇಸವಿ 1988, ಅಕ್ಟೋಬರ್ 15ರಂದು ತಮ್ಮ ಸೈಕಲ್ ಯಾತ್ರೆ ಆರಂಭಿಸಲು ಯೋಜಿಸಿದರು. ಆ ದಿನ ಮತ್ತೊಂದು ಕಾರಣಕ್ಕೂ ಭಾವೇಶ್ ಅವರಿಗೆ ಸೂಕ್ತವಾಗಿ ಕಂಡಿತ್ತು. 15 ಅಕ್ಟೋಬರ್ ಅನ್ನು 'ವಿಶ್ವ ಶ್ವೇತ ಬೆತ್ತದ ದಿನ' ಎಂದು ಆಚರಿಸುತ್ತಾರೆ. ಅಂಧರು ನಡೆದಾಡಲು ಬಳಸುವುದು ಬಿಳಿಯ ಬೆತ್ತವನ್ನು. ಅಂಧರ ಸಾಧನೆಗಳನ್ನು ಗುರುತಿಸಲು, ಸಂಭ್ರಮದಿಂದ ಆಚರಿಸಲು ಘೋಷಿಸಿದ ದಿನವಿದು. ಅಂಧ ಯುವಕನೊಬ್ಬ ನಾಗಪುರ ವಿಭಾಗದ ಈ ಸಣ್ಣ ಊರು ಗೋಂದಿಯಾದಿಂದ ನೇಪಾಳದ ಕಠಮಂಡುವಿಗೆ ಸೈಕಲ್ ಮೇಲೆ ಹೊರಡಲಿದ್ದ ಸಾಹಸ ಕಡಮೆಯದಲ್ಲ. ಈ ದಿನಕ್ಕೆ ವಿಶೇಷ ಮೆರುಗು ನೀಡುವ ಸಾಧನೆ ಇವರದಾಗಲಿತ್ತು.

ತಮ್ಮ ಪ್ರವಾಸದ ಯೋಜನೆಯಲ್ಲಿ, ದಿನಕ್ಕೆ 100ರಿಂದ 125 ಕಿಲೋಮೀಟರ್ ದೂರವನ್ನು ಕ್ರಮಿಸಬೇಕು ಎಂದು ನಿರ್ಧರಿಸಿದರು. ಅಷ್ಟೇ ಅಲ್ಲ, ಹಾದಿಯ ಪ್ರತಿಯೊಂದು ಪ್ರಸಿದ್ಧ ಹಾಗೂ ಐತಿಹಾಸಿಕ ಸ್ಥಳಗಳನ್ನು ಈ ಸೈಕಲ್ ಪ್ರವಾಸದಲ್ಲಿ ಮುಟ್ಟಿ ಬರುವುದೂ ಅವರ ಉದ್ದೇಶವಾಯಿತು. ದಿಲ್ಲಿಯಿಂದ ಅಯೋಧ್ಯೆಯವರೆಗೂ ಇದ್ದ ಪ್ರತಿ ತಾಣವನ್ನು ತಮ್ಮ ಈ ಸಾಹಸಯಾತ್ರೆಯಲ್ಲಿ ಸೇರಿಸಿಕೊಳ್ಳುವ ಇಚ್ಛೆ. ಕಡೆಗೂ ಕೆಲವು ಗೆಳೆಯರ ಸಹಾಯ ಪಡೆದು, ಹೋಗುವ ಮತ್ತು ಹಿಂತಿರುಗುವ ಮಾರ್ಗವನ್ನು ನಿರ್ಧರಿಸಿದರು.

ಈಗ ದಿನೇಶ್, ಭಾವೇಶ್ ಮತ್ತು ಪುರುಷೋತ್ತಮ ತಮ್ಮ ಪ್ರವಾಸದ ತಯಾರಿಗೆ ತೊಡಗಿದರು. ಮೊದಲಿಗೆ ಸೈಕಲ್ ತುಳಿಯುವ ಅಭ್ಯಾಸವನ್ನು, ಕಸರತ್ತನ್ನು ಚೆನ್ನಾಗಿ ಮಾಡಬೇಕಿತ್ತು. ಸುತ್ತಮುತ್ತಲಿನ ತಾಣದಲ್ಲಿ ದಿನವೂ 20–30 ಕಿಲೋಮೀಟರ್ ದೂರಕ್ಕೆ ಸೈಕಲ್ ತುಳಿದು ಬರುವರು. ಭಾವೇಶ್ ಕೆಲವು ಬಾರಿ ದಿನೇಶನ ಸೈಕಲ್‌ನಲ್ಲಿ ಮತ್ತೆ ಕೆಲವು ಬಾರಿ ಪುರುಷೋತ್ತಮನ ಸೈಕಲ್‌ನಲ್ಲಿ ಕೂರುವರು. ಅವರು ದಣಿದಾಗ, ತಮ್ಮ ಕಾಲುಗಳನ್ನು ಪೆಡಲ್‌ನಿಂದ ಮೇಲೆ ಎತ್ತುತ್ತಿದ್ದರು, ಹಿಂದೆ ಕುಳಿತ ಭಾವೇಶ್ ಪೆಡಲ್ ತುಳಿಯಲು ಆರಂಭಿಸುತ್ತಿದ್ದರು.

ಈ ಪ್ರವಾಸ ಸುಲಭವಿರಲಿಲ್ಲ. ಆದರೆ ಭಾವೇಶ್ ತಮ್ಮ ಬದುಕಿನ ಮಹತ್ತರದ ಪಾಠಗಳನ್ನು ಈ ಪ್ರವಾಸದಿಂದ ಕಲಿಯಲಿದ್ದರು. ಜೀವನದಲ್ಲಿ ಹೊಸದೇನನ್ನೋ ಮಾಡಲು ಹೊರಟಾಗ, ಎಲ್ಲಕ್ಕಿಂತಲೂ ಭಿನ್ನವಾದ ಹೆಚ್ಚಿನದೇನನ್ನೋ ಸಾಧಿಸಲು ಬಯಸಿದಾಗ, ಬದುಕು ನಮ್ಮ ಪೂರ್ಣ ಪರೀಕ್ಷೆ ತೆಗೆದುಕೊಳ್ಳುತ್ತದೆ.

ಸೈಕಲ್ ಪ್ರವಾಸಕ್ಕೆ ಉತ್ಸಾಹದಿಂದ ಸಿದ್ಧವಾಗುತ್ತಿದ್ದ ಆ ಸಮಯದಲ್ಲಿ ಭಾವೇಶ್ ಅವರ ವೈಯಕ್ತಿಕ ಬದುಕಿನಲ್ಲಿ ಏರುಪೇರುಗಳು ಉಂಟಾದವು. ಅವರ ತಂದೆ ಮತ್ತು ಜಸನೀಜೀ ಅವರ ನಡುವೆ ಏತಕ್ಕೋ ಸ್ವಲ್ಪ ಮತಭೇದ ಉಂಟಾಯಿತು. ಅದು ಮುಂದುವರೆದು ಸಂಕೀರ್ಣವಾಗಿ, ಮನಸ್ತಾಪದಲ್ಲಿ ಕೊನೆಗೊಂಡು, ತಂದೆ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಂಪನಿಯಿಂದ ಹೊರ ಬರಬೇಕಾಯಿತು. 25 ವರ್ಷಗಳ ಅವರ ದಿನಚರಿಯಲ್ಲಿ ಏಕಾಏಕಿ ಆದ ಬದಲಾವಣೆ ಅವರ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಬೀರಿತ್ತು. ತಂದೆಗೆ ಆ ಕಂಪನಿಯೇ ಎಲ್ಲವೂ ಆಗಿತ್ತು. ಸಂಬಂಧಿಕನ ಕಂಪನಿ, ಅದನ್ನು ತಮ್ಮದೇ ಕಂಪನಿಯೇನೋ ಅನ್ನುವಷ್ಟು ಮುತುವರ್ಜಿಯಿಂದ, ಶ್ರದ್ಧೆಯಿಂದ ಅಗಾಧ ಶ್ರಮವನ್ನು ಹಾಕಿ ಅಲ್ಲಿ ದುಡಿದಿದ್ದರು. ಬೆಳಗಿನಿಂದ ಸಂಜೆಯವರೆಗೂ ಕೆಲಸದಲ್ಲಿಯೇ ತೊಡಗಿರುತ್ತಿದ್ದ ತಂದೆ, ಈಗ ಏಕಾಏಕಿ ಕೆಲಸವಿಲ್ಲದೆ ಖಾಲಿ ಕುಳಿತಿದ್ದರು. ಆ ಕಂಪನಿಯಲ್ಲಿ ಹಣದ ಮೇಲ್ವಿಚಾರಣೆ ಹೊತ್ತ ಕ್ಯಾಷಿಯರ್ ಕೆಲಸದಿಂದ ಹಿಡಿದು ಮ್ಯಾನೇಜರ್‌ವರೆಗಿನ ಎಲ್ಲ ಕೆಲಸಗಳನ್ನೂ ಅವರೊಬ್ಬರೇ ಸಮರ್ಥವಾಗಿ ನಿರ್ವಹಿಸುತ್ತಿದ್ದರು. ತಮ್ಮ ಸಂಬಂಧಿಕರೇ ಅಲ್ಲವೇ ಎನ್ನುವ ಆಪ್ತಭಾವ ಅವರ ಮನದಲ್ಲಿ ಮನೆ ಮಾಡಿತ್ತು. ಆ ಕಂಪನಿಗಾಗಿ ಎಲ್ಲಿಲ್ಲದ ಬೆವರು ಸುರಿಸಿದ್ದರು. ಆದರೆ ಅವರಿಗೆ ಸಿಗುತ್ತಿದ್ದ ಸಂಬಳ ಹೆಚ್ಚಿರಲಿಲ್ಲ. ಮನೆಯ ಆರ್ಥಿಕ ಸ್ಥಿತಿ ಕಷ್ಟದಲ್ಲಿತ್ತು. ಈ ವಿಷಯವಾಗಿ ಅನೇಕ ಬಾರಿ ಜಸನೀಜೀ ಅವರೊಡನೆ ಮಾತನಾಡಿದ್ದರು.